ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 333 |
| ಉತ್ತರಿಸಬೇಕಾದ ದಿನಾಂಕ | 11.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ಶೇ.90ರಷ್ಟು ಖಾಸಗಿ ಬಿಲ್ಡರ್‌ಗಳು ವಸತಿ ಇಲಾಖೆ ಅಧೀನದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ನಿಯಮಾವಳಿಗಳನ್ವಯ ತಮ್ಮ ನಿರ್ಮಾಣ ಕಂಪನಿಗಳನ್ನು ನೋಂದಾಯಿಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದು, ಶೇ.10ರಷ್ಟು ಖಾಸಗಿ ಬಿಲ್ಡರ್‌ಗಳು ನೋಂದಣಿಯಿಲ್ಲದೇ ವಸತಿಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಯೋಜನೆಗಳನ್ನು ನೋಂದಾಯಿಸಲಾಗುತ್ತಿದ್ದು, ನಿರ್ಮಾಣ ಕಂಪನಿಗಳನ್ನು ನೋಂದಾಯಿಸುವುದಿಲ್ಲ.<br>ಆದರೆ ಸಕ್ಷಮ ಪ್ರಾಧಿಕಾರ / ಸ್ಥಳೀಯ ಸಂಸ್ಥೆಗಳಲ್ಲಿ ಅನುಮೋದನೆಗೊಂಡ ಯೋಜನೆಗಳು 500 ಚ.ಮೀ.ಗಿಂತ ಹೆಚ್ಚಿದ್ದಲ್ಲಿ ಅಥವಾ ಉದ್ದೇಶಿತ ಯೋಜನೆಗಳಲ್ಲಿ ಫ್ಲಾಟ್ / ನಿವೇಶನಗಳ ಸಂಖ್ಯೆಯು 08 ಕ್ಕಿಂತ ಹೆಚ್ಚಿದ್ದಲ್ಲಿ ರೇರಾ ಕಾಯ್ದೆಯ ಕಲಂ 3 & 4ರನ್ವಯ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಪ್ರಾಧಿಕಾರದಲ್ಲಿ ನೊಂದಾಯಿಸಬೇಕಾಗಿರುತ್ತದೆ.<br>ಹೌದು, ಖಾಸಗಿ ಬಿಲ್ಡರ್‌ಗಳು ರೇರಾ ನೋಂದಣಿ ಇಲ್ಲದೇ ವಸತಿಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (RERA) ವತಿಯಿಂದ ಬಹುತೇಕ ಖಾಸಗಿ ಬಿಲ್ಡರ್‌ಗಳು ವಸತಿ ಮನೆಗಳನ್ನು ನಿರ್ಮಿಸಲು ಪಡೆದಿರುವ ಅನುಮೋದನೆಗಿಂತ ಹೆಚ್ಚು ಅಂತಸ್ತು/ ಮಹಡಿಗಳನ್ನು/ ಮನೆಗಳನ್ನು ನಿರ್ಮಿಸಿ ಇಲಾಖೆಯ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಯಾವುದೇ ಕ್ರಮಕ್ಕೈಗೊಳ್ಳದಿರಲು ಕಾರಣಗಳೇನು; | ಖಾಸಗಿ ಬಿಲ್ಡರ್‌ಗಳು ಸಕ್ಷಮ ಪ್ರಾಧಿಕಾರ / ಸ್ಥಳೀಯ ಸಂಸ್ಥೆಗಳಲ್ಲಿ ಪಡೆದ ಅನುಮೋದನೆಗಿಂತ ಹೆಚ್ಚು ಅಂತಸ್ತು/ ಮಹಡಿಗಳನ್ನು/ ಮನೆಗಳನ್ನು ನಿರ್ಮಿಸುತ್ತಿದ್ದಲ್ಲಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ / ಸಕ್ಷಮ ಪ್ರಾಧಿಕಾರಗಳೇ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ. |
| ಇ) | ಈಗಾಗಲೇ ಪ್ರಾಧಿಕಾರದ ವತಿಯಿಂದ ಕಪ್ಪುಪಟ್ಟಿಗೆ ಸೇರಿಸಿರುವ ಖಾಸಗಿ ಬಿಲ್ಡರ್‌ಗಳು ಅಪಾರ್ಟ್‌ಮೆಂಟ್ /ವಸತಿ ಮನೆಗಳನ್ನು ನಿರ್ಮಿಸಲು ಮುಂದಾಗಿ ಸಾರ್ವಜನಿಕರ ಜೀವನಕ್ಕೆ ತೊಂದರೆ ನೀಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಖಾಸಗಿ ಬಿಲ್ಡರ್‌ಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸಾರ್ವಜನಿಕರ ಮಾಹಿತಿಗಾಗಿ ರೇರಾ ನೋಂದಣಿ ಆಗದ ಯೋಜನೆಗಳ ವಿವರಗಳನ್ನು ಪ್ರಾಧಿಕಾರದ ಅಂತರ್‌ಜಾಲದಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ.<br>ರೇರಾ ಕಾಯ್ದೆಯನುಸಾರ ತೊಂದರೆಗೊಳಗಾದ ಗೃಹ ಖರೀದಿದಾರರು ಹಣ ಮರುಪಾವತಿ ವಿಳಂಬ ಅವಧಿಗೆ ಬಡ್ಡಿ, ಪರಿಹಾರ ಧನ, ಇತ್ಯಾದಿ ಕೋರಿ ಪ್ರಾಧಿಕಾರದಲ್ಲಿ ಫಿರ್ಯಾದುಗಳನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಫಿರ್ಯಾದುಗಳನ್ನು ವಿಚಾರಣೆ ಮಾಡಿ ರೇರಾ ಕಾಯ್ದೆಯಡಿ ಸೂಕ್ತ ಆದೇಶಗಳನ್ನು ಹೊರಡಿಸುತ್ತದೆ. |

ಸಂಖ್ಯೆ: ವಇ 241 ರೇರಾ 2024]

(ಬಿ. ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು